# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು–570 006


ಸಂಖ್ಯೆ : ಕರಾಮುವಿ/ಆವಿ/ಸೇವಾಸಿಂಧು/ಜಿಎಲ್-6/2019-20

ದಿನಾಂಕ : 21.12.2019

**ಅಧಿಸೂಚನೆ**

**ವಿಷಯ** : ವಿಶ್ವವಿದ್ಯಾನಿಲಯದಲ್ಲಿ "ಸೇವಾಸಿಂಧು" ಸೇವೆಗಳನ್ನು ಜಾರಿಗೊಳಿಸುವ ಬಗ್ಗೆ.

**ಉಲ್ಲೇಖ** : 1. ಸರ್ಕಾರದ ಆದೇಶದ ಸಂಖ್ಯೆ :ಸಿಆಸುಇ 63 ಇವಿಜಿ 2017 ದಿನಾಂಕ :23.12.2017.

2. ಸರ್ಕಾರಿ ಆದೇಶ ಸಂಖ್ಯೆ: ಇಡಿ 11 ಇಜಿಒವಿ 2019, ಬೆಂಗಳೂರು, ದಿನಾಂಕ: 07.03.2019.

3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 19.12.2019

********

ರಾಜ್ಯದಲ್ಲಿ ನಾಗರಿಕರು ವಿವಿಧ ಇಲಾಖೆಗಳ ಸೇವೆಯನ್ನು ಪಡೆಯಲು ಆಯಾ ಇಲಾಖೆಗಳ ಕಚೇರಿಗಳಿಗೆ ಹಲವಾರು ಬಾರಿ ಭೇಟಿ ನೀಡುವ ಅನಿವಾರ್ಯತೆ ಇದ್ದದ್ದರಿಂದ, ಸರ್ಕಾರವು ಒಂದೇ ಸೂರಿನಡಿ ಎಲ್ಲಾ ಇಲಾಖೆಗಳ ಸೇವೆಯನ್ನು ನಾಗರಿಕರು ಪಡೆಯುವಂತೆ ಅನುಕೂಲವಾಗಲು, "ಸೇವಾ ಸಿಂಧು" ಯೋಜನೆಯನ್ನು ಉಲ್ಲೇಖ(1)ರ ಸರ್ಕಾರಿ ಆದೇಶದಲ್ಲಿ ಜಾರಿಗೊಳಿಸಲಾಗಿದೆ.

ಸರ್ಕಾರದ ಇ-ಆಡಳಿತ ಇಲಾಖೆಯು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗಕ್ಕೆ ಸಂಬಂಧಿಸಿದ Migration Certificate, Provisional Degree Certificate, Genuineness Certificate, and Degree/Convocation Certificate ಇವುಗಳ ಸೇವೆಯನ್ನು ವಿದ್ಯಾರ್ಥಿಗಳ ಉಪಯೋಗಕ್ಕೆ "ಸೇವಾ ಸಿಂಧು" ಯೋಜನೆಯನ್ನು ಉಲ್ಲೇಖ(2)ರ ಆದೇಶದಲ್ಲಿ ಜಾರಿಗೊಳಿಸಿದ್ದು ಈ ಸಂಬಂಧ WWW.sakala.kar.nic.in ಜಾಲತಾಣದಲ್ಲಿ ಪ್ರಕಟ ಪಡಿಸಿದ್ದು, Login Password ಗಳನ್ನು ನೀಡಿದ್ದು ತಕ್ಷಣದಿಂದ ಜಾರಿಗೆ ಬಂದಂತೆ ಆನ್‌ಲೈನ್ ತಂತ್ರಾಂಶದ(ಸೇವಾಸಿಂಧು) ಬಳಕೆಯನ್ನು ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗದಲ್ಲಿ ಅನುಷ್ಠಾನಗೊಳಿಸಿದೆ.

ಪರೀಕ್ಷಾ ವಿಭಾಗಕ್ಕೆ "ಸೇವಾಸಿಂಧು" ಯೋಜನೆಯಲ್ಲಿ ಬರುವ ಸೇವೆಗಳನ್ನು ನಿಗದಿತ ಅವಧಿಯೊಳಗೆ ಪೂರೈಸಲು ಕಡ್ಡಾಯಗೊಳಿಸಿದ್ದು ಮ್ಯಾನುವಲ್ ಆಗಿ ಅರ್ಜಿ ಸ್ವೀಕರಿಸುವುದನ್ನು ಕೂಡಲೇ ನಿಲ್ಲಿಸುವಂತೆ ಕ್ರಮ ಕೈಗೊಳ್ಳತಕ್ಕದು ಎಂಬುದಾಗಿ ಈ ಮೂಲಕ ತಿಳಿಸಲಾಗಿದೆ.

ಆದೇಶದ ಮೇರೆಗೆ

ಕುಲಸಚಿವರು

21/12/2019

ಗೆ,

ಕುಲಸಚಿವರು(ಪರೀಕ್ಷಾಂಗ), ಮತ್ತು ಪರೀಕ್ಷಾ ವಿಭಾಗದ ಎಲ್ಲಾ ಉಪ ಕುಲಸಚಿವರು/ಸಹಾಯಕ ಕುಲಸಚಿವರು/ ಅಧೀಕ್ಷಕರು – ಎಲ್ಲಾ ಕಾರ್ಯನಿರ್ವಾಹಕರುಗಳಿಗೆ ಅಗತ್ಯ ಮಾಹಿತಿ ನೀಡುವುದು.

ಪ್ರತಿ,

1. ಎಲ್ಲಾ ಶಾಸನಬದ್ಧ ಅಧಿಕಾರಿಗಳು,ಕರಾಮುವಿ,ಮೈಸೂರು
2. ಡೀನ್(ಅಧ್ಯಯನ ಕೇಂದ್ರಗಳು), ಕರಾಮುವಿ,ಮೈಸೂರು
3. ವಿಶೇಷ ಕರ್ತವ್ಯಾಧಿಕಾರಿಗಳು, ಮಾನ್ಯ ಕುಲಪತಿಗಳ ಆಪ್ತ ಕಾರ್ಯಾಲಯ, ಕರಾಮುವಿ, ಮೈಸೂರು.
4. ಕುಲಸಚಿವರ ಆಪ್ತ ಸಹಾಯಕರು, ಕರಾಮುವಿ, ಮೈಸೂರು.
5. ನೋಡಲ್ ಅಧಿಕಾರಿಗಳು, "ಸಕಾಲ ಸೇವೆ" ಮತ್ತು "ಸೇವಾಸಿಂಧು" ಸೇವೆಗಳು ಕರಾಮುವಿ, ಮೈಸೂರು-ಮಾಹಿತಿಗಾಗಿ
6. ಕಚೇರಿ ಪ್ರತಿ.

Scanned by CamScanner